**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.**

**ದಿಃ 13.02.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀಮತಿ.ಎಸ್ ಆರ್ ಜಿ ವಕೀಲರಿಂದಃ**

ಸದರಿ ಅಪಘಾತದ ಬಗ್ಗೆ ನಿಮಗೆ ಮಾಹಿತಿ ಹೇಗೆ ಬಂತು ಎಂದರೆ ಸಾಕ್ಷಿ ನಾನು ಮನೆಯಲ್ಲಿದ್ದಾಗ ನನಗೆ ಫೋನ್ ಮೂಲಕ ಮಾಹಿತಿ ಗೊತ್ತಾಗಿರುತ್ತದೆ ಎನ್ನುತ್ತಾರೆ. ಮಾಹಿತಿ ಯಾರು ಕೊಟ್ಟರು ಎಂದು ನಿಮಗೆ ಹೇಳಲು ಆಗುತ್ತದೆಯಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಅಪಘಾತವಾಗಿದೆ ಎಂದು ಹೇಳಲಾದ ಸಮಯದಲ್ಲಿ ವಿನಾಯಕಸ್ವಾಮಿ ಎಂಬುವವರು ಗಾಡಿ ಓಡಿಸುತ್ತಿದ್ದರು ಎಂದರೆ ಸರಿ. ವಿನಾಯಕಸ್ವಾಮಿ ಇವರು ನನ್ನ ಮಗ ಎಂದರೆ ಸರಿ. ಅಪಘಾತವಾದ ದಿನ ಆ ಕಾರಿನಲ್ಲಿ ಯಾರು ಯಾರು ಹೊರಟಿದ್ದರು ಎಂದರೆ ಸಾಕ್ಷಿ ಮಗ, ಸೊಸೆ ಮತ್ತು ಮೊಮ್ಮಗ ಎನ್ನುತ್ತಾರೆ. ಸದರಿ ಕಾರ್ ನನ್ನ ಮಗನದ್ದು ಎಂದರೆ ಸಾಕ್ಷಿ ನನ್ನ ಯಜಮಾನರದು ಎನ್ನುತ್ತಾರೆ. ಸದರಿ ಕಾರ್ ನ್ನು ಯಾರು ಉಪಯೋಗಿಸುತ್ತಿದ್ದರು ಎಂದರೆ ಸಾಕ್ಷಿ ನನ್ನ ಮಗ ಎನ್ನುತ್ತಾರೆ. ಅದೇ ರೀತಿ ಅಪಘಾತದ ದಿನ ನನ್ನ ಮಗ ಕಾರ್ ಚಲಾಯಿಸುತ್ತಿದ್ದ ಎಂದರೆ ಸರಿ. ಅಪಘಾತವಾದ ದಿನ ನನ್ನ ಮಗ ಶಿರಾ ಬಳಿ ಬುಕ್ಕಾಪಟ್ಟಣ ಬ್ರಿಡ್ಜನ ಬಳಿ ಜೋರಾಗಿ ಕಾರ್ ಚಲಾಯಿಸಿಕೊಂಡು ಹೋಗಿ ಡಿವೈಡರ್ ಗೆ ಡಿಕ್ಕಿ ಹೊಡೆದ ಎಂದರೆ ಸಾಕ್ಷಿ ಅದನ್ನು ನಾನು ನೋಡಿಲ್ಲ ಒಟ್ಟಿನಲ್ಲಿ ಅಪಘಾತವಾಗಿದೆ ಎನ್ನುತ್ತಾರೆ. ಪೊಲೀಸ್ ದಾಖಲೆಗಳಲ್ಲಿ ಕೂಡ ನನ್ನ ಮಗನೇ ಅತೀ ಜೋರಾಗಿ ಕಾರನ್ನು ಚಲಾಯಿಸಿ ಡಿವೈಡರ್ ಗೆ ಹೊಡೆದಿರುತ್ತಾನೆ ಎಂದು ಬರೆಯಲಾಗಿದೆ ಎಂದರೆ ಸರಿ. ಸದರಿ ಅಪಘಾತ ನನ್ನ ಮಗನ

ತಪ್ಪಿನಿಂದ ಆಗಿರುವ ಕಾರಣ ವಿಮಾ ಕಂಪನಿಯವರು ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ಅಪಘಾತವಾದ ಸಮಯದಲ್ಲಿ ನನ್ನ ಯಜಮಾನರು ಬೆಂಗಳೂರಿನಲ್ಲಿ ಇದ್ದರು. ನನ್ನ ಯಜಮಾನರು ಕಳೆದ ಅಕ್ಟೋಬರ್ 22 ರಂದು ಮರಣ ಹೊಂದಿರುತ್ತಾರೆ. ನಾನು ನನ್ನ ಅರ್ಜಿಯಲ್ಲಿ ನನ್ನ ಯಜಮಾನರು ಹಾವೇರಿಯ ಯಾಲಕ್ಕಿ ಓಣಿಯಲ್ಲಿ ಇರುತ್ತಿದ್ದರು ಎಂದು ಬರೆಸಿರುತ್ತೇನೆ ಎಂದರೆ ಸರಿ. ನನ್ನ ಯಜಮಾನರು ಮರಣ ಹೊಂದಿದ ಬಗ್ಗೆ ಅವರ ಮರಣ ಪ್ರಮಾಣಪತ್ರ ನ್ಯಾಯಾಲಯಕ್ಕೆ ಹಾಜರಪಡಿಸಿದ್ದೀರಾ ಎಂದರೆ ಸಾಕ್ಷಿ ಹಾಜರಪಡಿಸಿರುತ್ತೇನೆ ಎನ್ನುತ್ತಾರೆ.

ನನ್ನ ಗಂಡ ಅಡಿಕೆ ವ್ಯಾಪಾರ ಮಾಡುತ್ತಿದ್ದರು ಮತ್ತು ಕಲ್ಯಾಣ ಮಂಟಪದಲ್ಲಿ ಕ್ಲರ್ಕ ಕೆಲಸ ಮಾಡುತ್ತಿದ್ದರು. ನಾನು ಈಗ ಅದೇ ವ್ಯಾಪಾರ ಮಾಡುತ್ತಿದ್ದೇನೆ ಎಂದರೆ ಸಾಕ್ಷಿ ಇಲ್ಲ ಏನೂ ಮಾಡುತ್ತಿಲ್ಲ ಎನ್ನುತ್ತಾರೆ. ಅಡಿಕೆ ವ್ಯಾಪಾರದಿಂದ ಈಗಲೂ ಕೂಡ ನನಗೆ ಅದೇ ಆದಾಯ ಇದ್ದರೂ ಕೂಡ ಕೆಲಸ ಬಿಟ್ಟಿದ್ದೇನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗ, ಸೊಸೆ ಮತ್ತು ಮೊಮ್ಮಗ ಅಷ್ಟೇ ಬೆಂಗಳೂರಿನಲ್ಲಿ ಇರುತ್ತಿದ್ದರು ಎಂದರೆ ಸಾಕ್ಷಿ ನಾನು ಇರುತ್ತಿದ್ದೆ ಎನ್ನುತ್ತಾರೆ. ನಾನು ಮತ್ತು ನನ್ನ ಗಂಡ ಹಾವೇರಿಯಲ್ಲಿ ಪ್ರತ್ಯೇಕವಾಗಿ ಇರುತ್ತಿದ್ದೇವು ನಾನು ಯಾವತ್ತಿಗೂ ನನ್ನ ಸೊಸೆಯ ಮೇಲೆ ಅವಲಂಬಿತಳಾಗಿರಲಿಲ್ಲ ಎಂದರೆ ಸಾಕ್ಷಿ ಅದು ಸರಿಯಲ್ಲ ಎನ್ನುತ್ತಾರೆ. ನನ್ನ ಸೊಸೆ engineer ಇದ್ದರು ಎಂದು ತೋರಿಸಲು ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ಸಲ್ಲಿಸಿದ್ದೇನೆ ಎನ್ನುತ್ತಾರೆ. ನಾನು ಯಾವುದೇ ದಾಖಲೆಗಳನ್ನು ಸಲ್ಲಿಸದಿದ್ದರೂ ಕೂಡ ನನ್ನ ಸೊಸೆ engineer ಎಂದು ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದರಂತೆ ನನ್ನ ಸೊಸೆಗೆ 83,632/- ರೂ. ಪಗಾರ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದರಂತೆ ಅವರ ಅಂತ್ಯಕ್ರಿಯೆಗೆ ಒಂದು ಲಕ್ಷ ರೂ.ಗಳನ್ನು ಖರ್ಚು ಮಾಡಿದ್ದೇನೆ ಎಂದು ಹೇಳಿದ್ದು ಅದು ಕೂಡ ಸುಳ್ಳು ಎಂದರೆ ಸರಿಯಲ್ಲ. ಸದರಿ ಅಪಘಾತ ನನ್ನ ಮಗನ ತಪ್ಪಿನಿಂದ ಆಗಿರುವ ಕಾರಣ 2 ನೇ ಎದುರುದಾರರು ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ 1(ಎ) ಎದುರುದಾರರನ್ನು ಕೂಗಿ ಕರೆಸಲಾಗಿ ಗೈರು ಹಾಜರಿರುವ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು).**

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**